# ಕರ್ನಾಟಕ ಲೋಕಸೇವಾ ಆಯೋಗ

ದೂರವಾಣಿ ಸಂಖ್ಯೆ : 22268390
ಫ್ಯಾಕ್ಸ್ ಸಂಖ್ಯೆ: 22266481
ಅಂಚೆ ಪೆಟ್ಟಿಗೆ ಸಂಖ್ಯೆ : 5056
ಇ-ಮೇಲ್ ವಿಳಾಸ : kpsc-ka@nic.in

ಕರ್ನಾಟಕ ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು-560 001.
ವೆಬ್ ಸೈಟ್ : http://kpsc.kar.nic.in

ಸಂಖ್ಯೆ : Secy. ಇಟಿ-09/2023-24/PSC
ಅಡಕ ಪತ್ರಗಳು :

ದಿನಾಂಕ: 06-5-2023.

<u>ಇವರಿಂದ:</u>

ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ", ಬೆಂಗಳೂರು.

<u>ಇವರಿಗೆ:</u>

ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಸೇವಾ ನಿಯಮಗಳು-1),
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಸರ್ಕಾರದ ಕಾರ್ಯದರ್ಶಿಯವರ ಆಪ್ತ ಶಾಖೆ ಸಿ.ಆ.ಸು. ಇಲಾಖೆ
ಸಂಖ್ಯೆ
ದಿನಾಂಕ 8/5/23

ಮಾನ್ಯರೆ,

ವಿಷಯ:- ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು ದಿನಾಂಕ:31-12-2015ರ ನಿಯಮಗಳನ್ವಯ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ. ಪ್ರಕ್ರಿಯಕರಣ ಶೀಘ್ರ

ಉಲ್ಲೇಖ:- 1. ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 50 ಸೇನಿಬಿ 2022, ದಿನಾಂಕ:29-10-2022.
2. ಆಯೋಗದ ಪತ್ರ ಸಂಖ್ಯೆ:ಪಿಎಸ್‌ಸಿ 104 ಆರ್‌ಟಿಬಿ-4/2022-23/2261 ದಿನಾಂಕ:23-02-2023.
3. ಮಾನ್ಯ ಅಧ್ಯಕ್ಷರು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ರವರ ಟಿಪ್ಪಣಿ ದಿನಾಂಕ:05-05-2023.

*****

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಉಲ್ಲೇಖಿತ ದಿನಾಂಕ:29-10-2022ರ ಸರ್ಕಾರದ ನಡವಳಿಯಲ್ಲಿ, ಕೋವಿಡ್-19 ಹಾಗೂ ಲಾಕ್‌ಡೌನ್ ಕಾರಣದಿಂದಾಗಿ ಆರ್ಥಿಕ ಮಿತವ್ಯಯದ ದೃಷ್ಟಿಯಿಂದ ಆರ್ಥಿಕ ಇಲಾಖೆಯು ನೇಮಕಾತಿ ಪ್ರಕ್ರಿಯೆಗಳನ್ನು ನಿರ್ಬಂಧಿಸಿದ್ದ ಅವಧಿಯಲ್ಲಿ ಮುಖ್ಯ ಪಟ್ಟಿಯ (ಅಂತಿಮ ಆಯ್ಕೆಪಟ್ಟಿ) ಚಾಲ್ತಿಯಲ್ಲಿದ್ದ ನೇಮಕಾತಿಗಳಿಗೆ ಮಾತ್ರ ಸೀಮಿತಗೊಳಿಸಿ ಹೆಚ್ಚುವರಿ ಆಯ್ಕೆಪಟ್ಟಿಯ ಚಾಲ್ತಿಯ ಅವಧಿಯನ್ನು

ದಿನಾಂಕ:28–02–2023ರವರೆಗೆ ವಿಸ್ತರಿಸಿ ಆದೇಶಿಸಿದೆ. ಮುಂದುವರೆದು, ನೇರ ನೇಮಕಾತಿಯನ್ನು ಸ್ಥಗಿತಗೊಳಿಸಿದ್ದರಿಂದ ನಿಗದಿತ ಅವಧಿಯಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗದಿರುವ ಬಗ್ಗೆ ನೇಮಕಾತಿ ಪ್ರಾಧಿಕಾರಗಳು ಹಾಗೂ ಆಯ್ಕೆ ಪ್ರಾಧಿಕಾರವು ಖಚಿತ ಪಡಿಸಿಕೊಂಡು, ನೇಮಕಾತಿ ಪ್ರಾಧಿಕಾರಿಗಳಿಂದ ಬೇಡಿಕೆ ಪ್ರಸ್ತಾವನೆ ಸ್ವೀಕೃತವಾದಲ್ಲಿ ಮಾತ್ರ ಆಯ್ಕೆ ಪ್ರಾಧಿಕಾರವು ಹೆಚ್ಚುವರಿ ಆಯ್ಕೆಪಟ್ಟಿ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ ಎಂದು ಆದೇಶಿಸಲಾಗಿರುತ್ತದೆ. ಆದರೆ, ಕೋವಿಡ್–19 ಹಾಗೂ ಲಾಕ್‌ಡೌನ್ ಕಾರಣದ ಹೊರತಾಗಿಯೂ ಆಯೋಗದ ಸಿಬ್ಬಂದಿಯ ಕೊರತೆಯಿಂದ ಹಾಗೂ ನಿಯಮಗಳ ತಪ್ಪು ಗ್ರಹಿಕೆಯಿಂದಾಗಿ ಮತ್ತು ಆಯೋಗದ ನಿರ್ಣಯದಿಂದಾಗಿ ಹಲವು ಹುದ್ದೆಗಳ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಲು ಆಗದೇ, ಬಾಕಿ ಇರುವ ಹೆಚ್ಚುವರಿ ಪಟ್ಟಿಗಳಲ್ಲಿ ಕೆಲವು ಹುದ್ದೆಗಳ ಹೆಚ್ಚುವರಿ ಪಟ್ಟಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಹಾಗೂ ನಿಯಮಾನುಸಾರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳಲು ಹೆಚ್ಚುವರಿ ಪಟ್ಟಿ ಸಿದ್ಧಪಡಿಸುವ ಅನಿವಾರ್ಯತೆಯ ಕುರಿತಂತೆ ವಿಸ್ತೃತವಾಗಿ ಉಲ್ಲೇಖ(2)ರ ಪತ್ರದಲ್ಲಿ ತಿಳಿಸಲಾಗಿರುತ್ತದೆ.

2. ಈ ರೀತಿ ನ್ಯಾಯಾಲಯವು ನೀಡಿರುವ ತೀರ್ಪಿನನ್ವಯ ಹಾಗೂ ನಿಯಮಾನುಸಾರ ಹೆಚ್ಚುವರಿ ಪಟ್ಟಿ ಸಿದ್ಧಪಡಿಸಲು ಕ್ರಮವಹಿಸಲಾಗಿದ್ದು, ಆಯೋಗದಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ, ಹಲವು ಗ್ರೂಪ್ 'ಎ' 'ಬಿ' ಮತ್ತು 'ಸಿ' ವೃಂದದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯು ಜಾರಿಯಲ್ಲಿರುವ ಕಾರಣ ಹಾಗೂ ಹಲವು ಹುದ್ದೆಗಳ ನೇಮಕಾತಿಗಳಿಗೆ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವ ಸಲುವಾಗಿ ಮೂಲದಾಖಲೆಗಳ ಪರಿಶೀಲನೆಯಾಗಿರುವ ಅಭ್ಯರ್ಥಿಗಳ ಕೊರತೆ ಇರುವುದರಿಂದ ಪದೇ ಪದೇ ಮೂಲದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಗಳನ್ನು ಆಹ್ವಾನಿಸಿ, ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಸದರಿ ಪ್ರಕ್ರಿಯೆಯು ಇನ್ನೂ ಪ್ರಗತಿಯಲ್ಲಿರುತ್ತದೆ. ಈ ಅವಧಿಯಲ್ಲಿ ಸಿದ್ಧಪಡಿಸಲಾದ ಕೆಲವು ಹೆಚ್ಚುವರಿ ಪಟ್ಟಿ ಹಾಗೂ ಕೆಲವು ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದ ಹೆಚ್ಚುವರಿ ಪಟ್ಟಿಗಳಿಗೆ ಆಯೋಗದ ಅನುಮೋದನೆ ಪಡೆದು ಪ್ರಕಟಿಸಲಾಗಿರುತ್ತದೆ.

3. ಕ್ರಮ ಸಂಖ್ಯೆ:01ರ ಕಂಡಿಕೆಯಲ್ಲಿ ಈಗಾಗಲೇ ತಿಳಿಸಿರುವಂತೆ ಸರ್ಕಾರದ ದಿನಾಂಕ:29–10–2022ರ ಆದೇಶದನ್ವಯ ಆಯೋಗವು ಅಂತಿಮ/ಹೆಚ್ಚುವರಿ ಪಟ್ಟಿಗಳನ್ನು ಕೋವಿಡ್–19 ಹಾಗೂ ಲಾಕ್‌ಡೌನ್ ಸಮಯದಲ್ಲಿ ಸಿದ್ಧಪಡಿಸಿ, ಪ್ರಕಟಿಸಿದ್ದಲ್ಲಿ ಅಂತಹ ಪಟ್ಟಿಗಳನ್ನು ನೇಮಕಾತಿ ಪ್ರಾಧಿಕಾರಗಳು ಕಾರ್ಯಗತಗೊಳಿಸಲು ಸಾಧ್ಯವಾಗದಿದ್ದಲ್ಲಿ, ಅಂತಹ ಪ್ರಕರಣಗಳಿಗೆ ಮಾತ್ರ ಸೀಮಿತಗೊಳಿಸಿ, ಹೆಚ್ಚುವರಿ ಆಯ್ಕೆಪಟ್ಟಿಗಳ ಪ್ರಕಟಿಸುವ ಅವಧಿಯನ್ನು ವಿಸ್ತರಿಸಲಾಗಿರುತ್ತದೆಯೇ ಹೊರತು ಎಲ್ಲಾ ಪ್ರಕರಣಗಳು ಸದರಿ ಸರ್ಕಾರಿ ಆದೇಶದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

4. ಅದರಂತೆ, ಸರ್ಕಾರದ ಆದೇಶದಲ್ಲಿ ಉಲ್ಲೇಖಿಸಿರುವ ಅಂಶಗಳು ಪ್ರಸ್ತುತ ಆಯೋಗದಲ್ಲಿ ನಡೆಸುತ್ತಿರುವ ಬಹುತೇಕ ಹೆಚ್ಚುವರಿ ಪಟ್ಟಿಗಳಿಗೆ ಅನ್ವಯವಾಗುವುದಿಲ್ಲ ಎಂಬ ಅಂಶವನ್ನು ಆಯೋಗದ ಅನೇಕ ಸಭೆಗಳಲ್ಲಿ ಹಲವಾರು ಬಾರಿ ತಿಳಿಯಪಡಿಸಿರುತ್ತೇನೆ. ಅದಾಗ್ಯೂ, ದಿನಾಂಕ:15–03–2023ರ ನಂತರ ಸಿದ್ಧಪಡಿಸಲಾದ ಹೆಚ್ಚುವರಿ ಪಟ್ಟಿಗಳಿಗೆ ಆಯೋಗವು ಅನುಮೋದನೆಯನ್ನು ನೀಡಿರುವುದಿಲ್ಲ. ಪ್ರಸ್ತುತ ಉಲ್ಲೇಖಿತ ದಿನಾಂಕ:05–05–2023ರ ಟಿಪ್ಪಣಿಯಲ್ಲಿ ಸರ್ಕಾರದ ಸ್ಪಷ್ಟೀಕರಣ ಪಡೆದು ನಂತರ ಹೆಚ್ಚುವರಿ ಪಟ್ಟಿ ಸಿದ್ಧಪಡಿಸಲು ಕ್ರಮ ಕೈಗೊಳ್ಳುವಂತೆ ಮಾನ್ಯ ಆಯೋಗವು ಅಭಿಪ್ರಾಯಿಸಿರುತ್ತದೆ.

5. ಆಯೋಗದ ಕಾರ್ಯದರ್ಶಿಯಾಗಿ, ನನ್ನ ಅಭಿಪ್ರಾಯ ತಿಳಿಸುವುದೇನೆಂದರೆ, ಆಯೋಗವು ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸುವ ಕುರಿತಂತೆ ಸರ್ಕಾರವು ರೂಪಿಸಿರುವ ನಿಯಮವನ್ನು ಬೇರೆ ರೀತಿಯಲ್ಲಿಯೇ ಅರ್ಥೈಸಿಕೊಂಡು, ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಸಂದರ್ಭದಲ್ಲಿಯೇ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸದೇ ಇರುವುದರಿಂದ, ಈ ಬಗ್ಗೆ ಮಾನ್ಯ ನ್ಯಾಯಾಲಯಗಳು ತಮ್ಮ ತೀರ್ಪಿನಲ್ಲಿ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಲೇಬೇಕು ಎಂಬುದಾಗಿ ನಿರ್ದೇಶಿಸಿರುತ್ತದೆ. ಅಲ್ಲದೇ, ಸರ್ಕಾರದ ಆರ್ಥಿಕ ಸಹಮತಿ ಪಡೆದು, ಆಯೋಗವು ಅಧಿಸೂಚಿಸಲಾದ

ಹುದ್ದೆಗಳನ್ನು ಅಂತಿಮ ಆಯ್ಕೆಪಟ್ಟಿಯಲ್ಲಿ ಭರ್ತಿ ಮಾಡಿ, ನಂತರ ಕರ್ತವ್ಯಕ್ಕೆ ಹಾಜರಾಗದ ಹುದ್ದೆಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ನಿಯಮಾನುಸಾರ ಭರ್ತಿ ಮಾಡಬೇಕಾಗಿರುತ್ತದೆ. ಇಲ್ಲವಾದಲ್ಲಿ, ಈ ಹುದ್ದೆಗಳನ್ನು ನಿಯಮಾನುಸಾರವಾಗಿ ಮುಂದಿನ ನೇಮಕಾತಿಯಲ್ಲಿ ಭರ್ತಿ ಮಾಡುವ ಪ್ರಕ್ರಿಯೆ ಕೈಗೊಳ್ಳಲು ಹೆಚ್ಚಿನ ಕಾಲಾವಧಿ ಬೇಕಾಗುತ್ತದೆ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಅಭ್ಯರ್ಥಿಗಳ ಹಿತದೃಷ್ಟಿಯಿಂದ ಅವಶ್ಯಕವಾಗಿ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿರುತ್ತದೆ ಮತ್ತು ಇಲಾಖೆಗಳಿಂದ ಈಗಾಗಲೇ ಬೇಡಿಕೆ ಪತ್ರಗಳು ಸಲ್ಲಿಕೆಯಾಗಿರುವುದರಿಂದ, ಅದಕ್ಕನುಗುಣವಾಗಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ, ಸಂಬಂಧಿತ ಇಲಾಖೆಗಳಿಗೆ ರವಾನಿಸಬೇಕಾಗಿರುತ್ತದೆ. ನಿಯಮಾನುಸಾರ ಹೆಚ್ಚುವರಿ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆಪಟ್ಟಿ ಸಿದ್ಧಪಡಿಸಲು ಹಾಗೂ ಪ್ರಕಟಿಸಲು ಕಾಲಾವಧಿ ವಿಸ್ತರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅದಾಗ್ಯೂ, ಮಾನ್ಯ ಆಯೋಗವು ಸರ್ಕಾರದ ನಿಲುವನ್ನು ನಿರೀಕ್ಷಿಸುತ್ತಿರುವುದರಿಂದ ಅದರನ್ವಯ ತಾವು ಈ ಎಲ್ಲ ಅಂಶಗಳನ್ನು ಪರಾಮರ್ಶಿಸಿ, ನಿಯಮಾನುಸಾರ ಹೆಚ್ಚುವರಿ ಪಟ್ಟಿ ಹಾಗೂ ಹೆಚ್ಚುವರಿ ಆಯ್ಕೆಪಟ್ಟಿ ಸಿದ್ಧಪಡಿಸಲು ಕಾಲಾವಧಿಯನ್ನು ವಿಸ್ತರಿಸುವಂತೆ ಕೋರುತ್ತೇನೆ.

ತಮ್ಮ ವಿಶ್ವಾಸಿ,

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 104 ಆರ್‌ಟಿಬಿ-4/2022-23/2261

ಲೋಕಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ:23-02-2023.

ಇವರಿಂದ:

ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗಸೌಧ", ಬೆಂಗಳೂರು.

ಇವರಿಗೆ:

ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ,
(ಸೇವಾ ನಿಯಮಗಳು-1),
ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ, ಬೆಂಗಳೂರು.

ಮಾನ್ಯರೆ,

*ವಿಷಯ:-* ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು ದಿನಾಂಕ:31-12-2015ರ ನಿಯಮಗಳನ್ವಯ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ.

ಉಲ್ಲೇಖ:- ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 50 ಸೇನಿಬಿ 2022, ದಿನಾಂಕ:29-10-2022.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ದಿನಾಂಕ:29-10-2022ರ ಸರ್ಕಾರದ ನಡವಳಿಯಲ್ಲಿ, ಕೋವಿಡ್-19 ಹಾಗೂ ಲಾಕ್‌ಡೌನ್ ಕಾರಣದಿಂದಾಗಿ ಆರ್ಥಿಕ ಮಿತವ್ಯಯದ ದೃಷ್ಟಿಯಿಂದ ಆರ್ಥಿಕ ಇಲಾಖೆಯು ನೇಮಕಾತಿ ಪ್ರಕ್ರಿಯೆಗಳನ್ನು ನಿರ್ಬಂಧಿಸಿದ್ದ ಅವಧಿಯಲ್ಲಿ ಮುಖ್ಯ ಪಟ್ಟಿಯ (ಅಂತಿಮ ಆಯ್ಕೆಪಟ್ಟಿ) ಚಾಲ್ತಿಯಲ್ಲಿದ್ದ ನೇಮಕಾತಿಗಳಿಗೆ ಮಾತ್ರ ಸೀಮಿತಗೊಳಿಸಿ ಹೆಚ್ಚುವರಿ ಆಯ್ಕೆಪಟ್ಟಿಯ ಚಾಲ್ತಿಯ ಅವಧಿಯನ್ನು ದಿನಾಂಕ:28-02-2023ರವರೆಗೆ ವಿಸ್ತರಿಸಿ ಆದೇಶಿಸಿದೆ. ಮುಂದುವರೆದು, ನೇರ ನೇಮಕಾತಿಯನ್ನು ಸ್ಥಗಿತಗೊಳಿಸಿದ್ದರಿಂದ ನಿಗದಿತ ಅವಧಿಯಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಕಾರ್ಯಗತಗೊಳಿಸಲು ಸಾಧ್ಯವಾಗದಿರುವ ಬಗ್ಗೆ ನೇಮಕಾತಿ ಪ್ರಾಧಿಕಾರಗಳು ಹಾಗೂ ಆಯ್ಕೆ ಪ್ರಾಧಿಕಾರವು ಖಚಿತ ಪಡಿಸಿಕೊಂಡು, ನೇಮಕಾತಿ ಪ್ರಾಧಿಕಾರಿಗಳಿಂದ ಬೇಡಿಕೆ ಪ್ರಸ್ತಾವನೆ ಸ್ವೀಕೃತವಾದಲ್ಲಿ ಮಾತ್ರ ಆಯ್ಕೆ ಪ್ರಾಧಿಕಾರವು ಹೆಚ್ಚುವರಿ ಆಯ್ಕೆಪಟ್ಟಿ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ ಎಂದು ಆದೇಶಿಸಿರುವುದು ಸರಿಯಷ್ಟೆ.

...2

ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು ದಿನಾಂಕ:31-12-2015ರಂತೆ ಕರ್ನಾಟಕ ಲೋಕಸೇವಾ ಆಯೋಗವು ನೇಮಕಾತಿಯನ್ನು ನಡೆಸುತ್ತಿದ್ದು, ಸದರಿ ನಿಯಮ (5)ರ ಕಲಂ (4)ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.

> **"The Commission shall also simultaneously prepare an additional list of candidates not included in the main list not more than fifty percent in respect of Technical posts and Ten percent in respect of non-technical posts which may be operated only once to the extent of unreported vacancies and the same shall be in force for a period of one and half years from the date of its publication".**

ಆಯೋಗವು ನಡೆಸುತ್ತಿರುವ ಗ್ರೂಪ್ 'ಎ' 'ಬಿ' ಮತ್ತು 'ಸಿ' ವೃಂದದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ನಿಯಮಾನುಸಾರ ಅಂತಿಮ ಆಯ್ಕೆಪಟ್ಟಿಯೊಂದಿಗೆ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಬೇಕಿದ್ದಲ್ಲಿ ಎಲ್ಲಾ ಅಭ್ಯರ್ಥಿಗಳಿಗೆ ಮೂಲದಾಖಲೆಗಳ ಪರಿಶೀಲನೆಯನ್ನು ನಡೆಸಬೇಕಿರುವ ಕಾರಣ ಶೀಘ್ರವಾಗಿ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವುದು ಕಷ್ಟಕರವಾಗಿರುತ್ತದೆ. ಆದ್ದರಿಂದ ಆಯೋಗವು ಈ ವಿಷಯದ ಕುರಿತು ಕೂಲಂಕುಷವಾಗಿ ಪರಿಶೀಲಿಸಿ ನೇಮಕಾತಿಗಳಲ್ಲಿ ಮೊದಲು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ತದನಂತರ ಸಂಬಂಧಿತ ಇಲಾಖೆಗಳಿಂದ ನಮೂನೆ-7 ಸ್ವೀಕೃತವಾದ ನಂತರ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವಂತೆ ದಿನಾಂಕ: 14-02-2017ರ ಆಯೋಗದ ನಡವಳಿಯಲ್ಲಿ ತೀರ್ಮಾನಿಸಿರುತ್ತದೆ. ಅದರಂತೆ ಇಲಾಖೆಯಿಂದ ನಮೂನೆ-7 ಒಂದುವರೆ ವರ್ಷದೊಳಗೆ ಸ್ವೀಕೃತವಾದಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಮುಂದುವರೆದು, ರಾಜ್ಯದಲ್ಲಿ ಕೋವಿಡ್-19 ಹಾಗೂ ಲಾಕ್‌ಡೌನ್ ಕಾರಣದಿಂದಾಗಿ ಅಂತಿಮ ಆಯ್ಕೆಪಟ್ಟಿ ಬಿಡುಗಡೆಯಾದ ನೇಮಕಾತಿಗಳಲ್ಲಿ ಸಂಬಂಧಿತ ಇಲಾಖೆಗಳು ನಿಯಮಾನುಸಾರ ನಮೂನೆ-7ನ್ನು ನಿಗದಿತ ಕಾಲಮಿತಿಯೊಳಗೆ ಆಯೋಗಕ್ಕೆ ಸಲ್ಲಿಸಿರುವುದಿಲ್ಲ. ಆದ್ದರಿಂದ ಆಯೋಗವು ಹಲವು ಇಲಾಖೆಗಳಿಂದ ಸ್ವೀಕೃತವಾಗಿದ್ದ ನಮೂನೆ-7ನ್ನು ನಿಯಮಾನುಸಾರ ಹೆಚ್ಚುವರಿ ಆಯ್ಕೆಪಟ್ಟಿ ಸಿದ್ಧಪಡಿಸಲು ನಿಗದಿತ ಕಾಲಮಿತಿ ಮೀರಿರುವುದಾಗಿ ತಿಳಿಸಿ, ಸಂಬಂಧಪಟ್ಟ ಇಲಾಖೆಗಳಿಗೆ ಹಿಂದಿರುಗಿಸಿರುತ್ತದೆ.

ಇದಲ್ಲದೆ, ಆಯೋಗದಿಂದ ನಮೂನೆ-7ನ್ನು ಹಿಂತಿರುಗಿಸಿರುವ ಕಾರಣ ಹಲವಾರು ಅಭ್ಯರ್ಥಿಗಳು ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದು, ಆಯೋಗವು ನಡೆಸಿರುವ 2017-18ನೇ ಸಾಲಿನ ಜಲಸಂಪನ್ಮೂಲ ಇಲಾಖೆಯ ಸಹಾಯಕ ಇಂಜಿನಿಯರ್/ಕಿರಿಯ ಇಂಜಿನಿಯರ್ (ಸಿವಿಲ್/ಮೆಕ್ಯಾನಿಕಲ್) ಹುದ್ದೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನ್ಯಾಯಾಲಯವು ಕೆಳಕಂಡಂತೆ ಆದೇಶಿಸಿರುತ್ತದೆ.

> **"The applications are allowed. It is held that the action of the third respondent in not preparing and publishing the additional select list of candidates as required under Rule 5(7) of Karnataka Water Resource Department (Recruitment to the cadre of Assistant Engineers and Junior Engineers) (Special) Rules, 2017 is illegal. The third respondent is directed to**

prepare and publish the additional select list and forward the same to the second respondent within a period of six weeks from the date of receipt of a copy of this order. The respondents no.1 and 2 are further directed that if the applicants are selected and included in the additional list, on receipt of the said additional select list from the third respondent, to consider them for appointment based on merit and reservation, if the posts under that reserved category is available, within two months thereafter".

ದಿನಾಂಕ:16–11–2016ರಲ್ಲಿ ಅಧಿಸೂಚಿಸಲಾದ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರು ಹುದ್ದೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನ್ಯಾಯಾಲಯವು ಕೆಳಕಂಡಂತೆ ಆದೇಶಸಿರುತ್ತದೆ.

"Application is disposed of directing the authorities to consider the representation of the applicant for preparation of the additional list as per Rule 3C(3) of the Rules and based on the request made by the departments indicating that vacancies are unfilled because of dearth of candidates forward the same and said exercise required to be completed within a period of two months from the date of receipt of copy of this order".

ನ್ಯಾಯಾಲಯದ ಆದೇಶದಂತೆ ನಿಯಮಾನುಸಾರ ಅಂತಿಮ ಆಯ್ಕೆಪಟ್ಟಿಯ ಜೊತೆಯಲ್ಲಿಯೇ ಹೆಚ್ಚುವರಿ ಪಟ್ಟಿಯನ್ನು ಆಯೋಗವು ಸಿದ್ಧಪಡಿಸಿಲ್ಲವಾದ್ದರಿಂದ ಪ್ರಸ್ತುತ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸುವಂತೆ ಆದೇಶಿಸಿರುತ್ತದೆ.

ದಿನಾಂಕ:05–10–2016ರಲ್ಲಿ ಅಧಿಸೂಚಿಸಲಾದ ಉಪ ನೋಂದಣಾಧಿಕಾರಿ ಹುದ್ದೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನ್ಯಾಯಾಲಯವು ಕೆಳಕಂಡಂತೆ ಆದೇಶಸಿರುತ್ತದೆ.

"Application are allowed and it is held that action of the 3rd respondent in not preparing and publishing the 10% additional select list of candidates as required under Rule 8(4) of Karnataka Civil Services (Direct Recruitment by Competitive Examaination and Selection) (General) Rules, 2006 amended Rules, 2015 is illegal. The 3rd respondent is directed to prepare and publish the 10% additional select list and forward the same to the 2nd respondent, within a period of six weeks from the date of receipt of copy of order.

The 2nd respondent is further directed that if applicants are selected and included in the additional list, on receipt of the said additional select list from the 3rd respondent, to consider them for appointment based on merit and reservation, if the posts under that reserved category is available, within two months thereafter".

ಮೇಲ್ಕಂಡಂತೆ ವಿವಿಧ ನೇಮಕಾತಿಗಳಲ್ಲಿ ನ್ಯಾಯಾಲಯದ ಆದೇಶಗಳಲ್ಲಿನ ಅಂಶಗಳನ್ನು ಮರುಪರಿಶೀಲಿಸಿದ ಆಯೋಗವು ದಿನಾಂಕ:18–01–2023ರ ಸಭೆಯಲ್ಲಿ ಆಯೋಗದ ದಿನಾಂಕ:14–02–2017ರ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಹಿಂಪಡೆಯಲು ತೀರ್ಮಾನಿಸಿ, ಇನ್ನು ಮುಂದೆ ನಿಯಮಾನುಸಾರ ಎಲ್ಲಾ ಹುದ್ದೆಗಳಿಗೆ ಅಂತಿಮ ಆಯ್ಕೆಪಟ್ಟಿಯೊಂದಿಗೆ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ ಪ್ರಕಟಿಸುವುದು ಎಂದು

ಮುಂದುವರೆದು, ಕಾಲಮಿತಿಯನ್ನು ವಿಸ್ತರಿಸಿಕೊಂಡಿದ್ದಾಗ್ಯೂ ಆಯೋಗದಲ್ಲಿ ಸಿಬ್ಬಂದಿಗಳ ಕೊರತೆಯಿಂದಾಗಿ, ಹಲವು ಗ್ರೂಪ್ 'ಎ' 'ಬಿ' ಮತ್ತು 'ಸಿ' ವೃಂದದ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯು ಜಾರಿಯಲ್ಲಿರುವ ಕಾರಣ ಹಾಗೂ ಹಲವು ಹುದ್ದೆಗಳ ನೇಮಕಾತಿಗಳಿಗೆ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವ ಸಲುವಾಗಿ ಮೂಲದಾಖಲೆಗಳ ಪರಿಶೀಲನೆಯಾಗಿರುವ ಅಭ್ಯರ್ಥಿಗಳ ಕೊರತೆ ಇರುವುದರಿಂದ ಪದೇ ಪದೇ ಮೂಲದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಗಳನ್ನು ಆಹ್ವಾನಿಸಿ, ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿರುವ ಹಿನ್ನೆಲೆಯಲ್ಲಿ ನಿಗದಿತ ವಿಸ್ತೃತ ದಿನಾಂಕದೊಳಗೆ ಹೆಚ್ಚುವರಿ ಪಟ್ಟಿಯನ್ನು ಸಿದ್ಧಪಡಿಸಲು ಸಾಧ್ಯವಾಗಿರುವುದಿಲ್ಲ.

ಅಲ್ಲದೆ ಕರ್ನಾಟಕ ಸಿವಿಲ್ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು ತಿದ್ದುಪಡಿ ನಿಯಮಗಳು ದಿನಾಂಕ:31-12-2015ಅನ್ನು ಪರಿಶೀಲಿಸಲಾಗಿ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಿದ ದಿನಾಂಕದಿಂದ ಒಂದುವರೆ ವರ್ಷದ ಅವಧಿ ಚಾಲ್ತಿಯಲ್ಲಿರುತ್ತದೆ. ಅದರಂತೆ ಆಯೋಗವು ಅಂತಿಮ ಆಯ್ಕೆಪಟ್ಟಿ ಪ್ರಕಟಿಸಿ, ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಬೇಕಿರುವ ಎಲ್ಲಾ ನೇಮಕಾತಿಗಳಲ್ಲಿ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಲಾಗುವುದು. ನಂತರ ಸಂಬಂಧಿತ ಇಲಾಖೆಗಳಿಂದ ನಮೂನೆ-7 ಸ್ವೀಕೃತವಾದಲ್ಲಿ ಹೆಚ್ಚುವರಿ ಆಯ್ಕೆಪಟ್ಟಿಯನ್ನು ಪ್ರಕಟಿಸಿ, ಸದರಿ ಇಲಾಖೆಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದು ಎಂಬ ಮಾಹಿತಿಯನ್ನು ತಮ್ಮ ಆದ್ಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ತಮ್ಮ ವಿಶ್ವಾಸಿ,

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.